**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ತೇಜಸ್ವಿನಿ ಗೌಡ, ಮಾನ್ಯ ವಿಧಾನಪರಿಷತ್ ಸದಸ್ಯರು ಅವರು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆ ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ ಇವರ ಉತ್ತರ.**

**ಸೂಚನೆ :**

ಕರ್ನಾಟಕದ ಇತಿಹಾಸದಲ್ಲಿ ಕ್ರಿ.ಶ. 6ನೇ ಶತಮಾನದಿಂದ ಕ್ರಿ.ಶ 1050ನೇ ಇಸವಿಯ ವರೆಗೆ ಸಾವಿರ ವರ್ಷಗಳ ಕಾಲ ಆಳಿದ ಸುದೀರ್ಘ ಚರಿತ್ರೆ 'ತಲಕಾಡಿನ ಗಂಗರ' ಸಾಮ್ರಾಜ್ಯವಿದ್ದು, 2 ರಾಜಧಾನಿ ಹೊಂದಿದ್ದು 'ಕೋಲಾರ' ಇನ್ನೊಂದು ರಾಜಧಾನಿ. ಗಂಗರ ಆಳ್ವಿಕೆಯಲ್ಲಿ ಇಂದಿನ ಕರ್ನಾಟಕ ಬಹುತೇಕ ಭಾಗಗಳಿಗೆ ಕೃಷಿ, ಕಲೆ, ಸಂಸ್ಕೃತಿ, ರಾಜಕೀಯ ಪ್ರಗತಿಗೆ ಅಪಾರ ಕೊಡುಗೆ ನೀಡಿದೆ. ಗಂಗರ ಆಳ್ವಿಕೆ, ಅದೇ ಈ ಬಗ್ಗೆ ಅವರಿಗೆ ಸಿಗಬೇಕಾದ ಪ್ರಚಾರ, ಮಾಹಿತಿ, ಚರಿತ್ರೆ ರಚನೆಯಲ್ಲಿ ಕೊರತೆಯಾಗಿದೆ. ಹೀಗಾಗಿ ಈ ಬಗ್ಗೆ ನಾಡಿಗೆ ತಿಳಿಸಲು ಈ ಸದನದಲ್ಲಿ ಚರ್ಚೆಗೆ ಅವಕಾಶ ನೀಡಬೇಕಾಗಿ ಕೋರಿದೆ.

******

**ಉತ್ತರ :**

- ಕರ್ನಾಟಕದಲ್ಲಿ ಕ್ರಿ.ಶ. 5ನೇ ಶತಮಾನದಿಂದ ಕ್ರಿ.ಶ. 10ನೇ ಶತಮಾನದವರೆಗೆ ಧೀರ್ಘಾವಧಿಯ ಆಳ್ವಿಕೆ ನಡೆಸಿದ ಕೀರ್ತಿ ತಲಕಾಡಿನ ಗಂಗರಿಗೆ ಸಲ್ಲುತ್ತದೆ.
- ಗಂಗ ರಾಜವಂಶದ ಇತಿಹಾಸದ ಕುರಿತಾಗಿ ಪುರಾತತ್ವ ಇಲಾಖಾವತಿಯಿಂದ ಸಾಕಷ್ಟು ಸಂಶೋಧನೆಗಳನ್ನು ಈವರೆವಿಗೂ ಕೈಗೊಳ್ಳಲಾಗಿದೆ.
- ಮೈಸೂರು ಮತ್ತು ಕೋಲಾರ ಜಿಲ್ಲೆಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳಿದ್ದು ಅವುಗಳನ್ನು ಸಂಬಂಧಪಟ್ಟ ಇಲಾಖೆಗಳು ಸಂರಕ್ಷಣೆ ಮಾಡಿಕೊಂಡು ಬರಲಾಗುತ್ತಿದೆ (ಸ್ಮಾರಕಗಳ ಪಟ್ಟಿ ಲಗತ್ತಿಸಿದೆ).
- ತಲಾ ಮತ್ತು ಕಾಡ ಎಂಬ ಇಬ್ಬರು ಕಿರಾತ ಸೋದರರಿಂದ ಈ ಊರಿಗೆ ತಲಕಾಡು ಎಂಬ ಹೆಸರು ಬಂದಿದೆ. ಪಂಚಾಂಗದ ಪ್ರಕಾರ ಎರಡು ನಕ್ಷತ್ರಗಳು ಒಂದೂಗೂಡುವ ಶುಭ ಸಂದರ್ಭದ ಕಾರ್ತಿಕ ಮಾಸದಲ್ಲಿ ಅಮವಾಸ್ಯೆಯ ದಿನ ಪಂಚಲಿಂಗ ದರ್ಶನವನ್ನು ಆಚರಿಸಲಾಗುತ್ತದೆ. ಕ್ರಮವಾಗಿ ವೈದ್ಯ ನಾಥೇಶ್ವರನ ಆರ್ಕೇಶ್ವರ, ಪಾತಾಳೇಶ್ವರ, ಜುರುಳೇಶ್ವರ ಮಲ್ಲಿಕಾರ್ಜುನರಿಗೆ ಪೂಜೆ ಮತ್ತು ಕೀರ್ತಿ ನಾರಾಯಣರಿಗೆ ಏಕ ಕಾಲದಲ್ಲಿ ಪೂಜೆ ನಡೆಯುತ್ತಿದೆ. ಇದು ರಾಷ್ಟ್ರ ಮಟ್ಟದಲ್ಲಿ ಪ್ರಚಾರ ಪಡೆದಿದೆ.
- No.ITY113 KMU 92 Dated 21.12.1994 ರೀತ್ಯಾ ತಲಕಾಡಿನ ಮರಳು ದಿಣ್ಣೆಯನ್ನು ರಾಜ್ಯ ಸಂರಕ್ಷಿತ ಪ್ರದೇಶವನ್ನಾಗಿ ಸರ್ಕಾರದಿಂದ ಘೋಷಿಸಲಾಗಿದೆ.
- 1992 ರಿಂದ 2019 ರವರೆಗೂ ಇಲಾಖೆಯ ವತಿಯಿಂದ ತಲಕಾಡು ಪ್ರದೇಶದಲ್ಲಿ ಹಲವು ಹಂತಗಳಲ್ಲಿ ಪುರಾತತ್ವ ಉತ್ಖನನ ನಡೆಸಿ ಎರಡು ಸಂಪುಟಗಳಲ್ಲಿ ವರದಿಯನ್ನು ಪ್ರಕಟಿಸಲಾಗಿದೆ.
- ಉತ್ಖನನ ಕಾರ್ಯದ ಸಂದರ್ಭದಲ್ಲಿ ದೊರೆತ ಪ್ರಾಚ್ಯಾವಶೇಷಗಳಾದ ಮಣ್ಣಿನ ಮಡಿಕೆಗಳು/ ಮಡಿಕೆ ಚೂರುಗಳು/ ಶಾಸನಗಳು ಮತ್ತು ಶಿಲಾಶಿಲ್ಪಗಳು ಹಾಗೂ ಉತ್ಖನನದ ಕುರಿತಂತೆ ಛಾಯಾಚಿತ್ರಗಳು ಮತ್ತು ಅದಕ್ಕೆ ಸಂಬಂಧಿಸಿದ ಸಾರಾಂಶಗಳನ್ನು ಮುದ್ರಿಸಿ frameಗಳಲ್ಲಿ ಅಳವಡಿಸಿ, ಇಲಾಖೆಯ ಕೇಂದ್ರ ಕಛೇರಿಯ ಗ್ಯಾಲರಿಯಲ್ಲಿ ವಿದ್ಯಾರ್ಥಿಗಳು/ ಸಂಶೋಧಕರು /ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರುಗಳು ಉಚಿತವಾಗಿ ವೀಕ್ಷಣೆ ಮಾಡಲು ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

- ಹಾಗೆಯೆ ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿಯು ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಹಲವು ವೀರಗಲ್ಲುಗಳು ಮೂರ್ತಿಶಿಲ್ಪಗಳು ಶಾಸನಗಳನ್ನು ಸಂರಕ್ಷಿಸಿ ಸಾರ್ವಜನಿಕರ ವೀಕ್ಷಣೆಗೆ ಪ್ರದರ್ಶಿಸಲಾಗಿದೆ.
- ಗಂಗರ ಕಾಲದ ಪ್ರಸಿದ್ಧ ಐತಿಹಾಸಿಕ ತಾಣವಾಗಿರುವ ಶ್ರವಣ ಬೆಳಗೋಳದಲ್ಲಿರುವ ಸ್ಮಾರಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಲಾಗಿದೆ ಇಲ್ಲಿರುವ ಗೊಮ್ಮಟೇಶ್ವರ ಏಕಶಿಲಾಮೂರ್ತಿಯನ್ನು ಗಂಗರ ಮಂತ್ರಿ ಚಾವುಂಡರಾಯನು ಕ್ರಿ.ಶ.981 ರಲ್ಲಿ ನಿರ್ಮಿಸಲಾಗಿದೆ. ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ಮಹಾಮಸ್ತಕಾಭಿಷೇಕವನ್ನು ಸರ್ಕಾರ ಹಾಗೂ ಸ್ಥಳೀಯ ಧಾರ್ಮಿಕ ಸಂಸ್ಥೆಯೊಂದಿಗೆ ಸೇರಿ ಆಚರಿಸಿಕೊಂಡು ಬರಲಾಗುತ್ತಿದೆ.
- ಈ ಸಂದರ್ಭದಲ್ಲಿ ಈ ಕಾರ್ಯಕ್ರಮಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ನೀಡಲಾಗುತ್ತದೆ.
- ಗಂಗರು ರಾಜ್ಯಭಾರ ನಡೆಸಿದ ಪ್ರದೇಶಗಳನ್ನು ಒಳಗೊಂಡ ಜಿಲ್ಲೆಗಳಾದ ಮೈಸೂರು ಮತ್ತು ಕೋಲಾರ ಜಿಲ್ಲೆಗಳ ಇತಿಹಾಸ ಮತ್ತು ಪುರಾತತ್ವ ಸಂಶೋಧನಾ ಲೇಖನಗಳ ಒಳಗೊಂಡ ಸಂಶೋಧನಾ ಗ್ರಂಥಗಳನ್ನು ಇಲಾಖೆಯು ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಕಟಿಸಿದೆ ಹಾಗೂ ಈ ಸಂಶೋಧನಾ ಗ್ರಂಥಗಳು ಮಾರಾಟಕ್ಕೆ ಲಭ್ಯವಿರುತ್ತದೆ.

TOR/ 273 / TDV / 2023

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

| ಮೈಸೂರು ಜಿಲ್ಲೆ | | | | | | | |
|---|---|---|---|---|---|---|---|
| ಕ್ರ ಸಂ | ತಾಲ್ಲೂಕು | ಸ್ಥಳ | ಕ್ರ ಸಂ | ರಾಜ್ಯದ ಸ್ಮಾರಕಗಳು/ | ಕ್ರ ಸಂ | ಎ.ಎಸ್.ಐ ಸ್ಮಾರಕಗಳು/ನೆಲೆಗಳು | ಸರ್ಕಾರಿ ಆದೇಶ ಸಂಖ್ಯೆ |
| 1 | ಹೆಗ್ಗಡದೇವನಕೋಟೆ | ಹೆಗ್ಗಡದೇವನಕೋಟೆ | 1 | ವರದರಾಜಸ್ವಾಮಿ ದೇವಾಲಯ | | – | |
| | " | ಮಟಕೆರೆ | 2 | ರಾಮೇಶ್ವರ ದೇವಾಲಯ | | – | |
| | " | ಮುಳ್ಳೂರು | | – | 1 | ಲಕ್ಷ್ಮೀಕಾಂತಸ್ವಾಮಿ ದೇವಾಲಯ | |
| 2 | ಹುಣಸೂರು | ಬೆಟ್ಟದೂರು | 3 | ಗೋಮಟೇಶ್ವರ ಬೆಟ್ಟದ ಮೇಲಿನ ಗೋಮಟೇಶ್ವರ ವಿಗ್ರಹ ಹಾಗೂ ದೇವಾಲಯ | | – | ED 78 TAM61 dt.31.5.61<br>ED 78 TAM 61 dt.12.4.62 |
| | " | ಧರ್ಮಪುರ | 4 | ಕೇಶವ ದೇವಾಲಯ | | – | No.D.8048 Edn 8625 Dated 12.09.1930 |
| 3 | ಕೃಷ್ಣರಾಜನಗರ | ಚಿಕ್ಕಹನಸೋಗೆ | 5 | ಆದಿನಾಥ ಬಸದಿ (ತ್ರಿಕೂಟ ಬಸದಿ) | | – | No.D.8048 Edn 8625 Dated 12.09.1930 |
| | " | ಕೆ.ಆರ್.ನಗರ (ಕಾವೇರಿ ದಡ) | 6 | ಅರ್ಕೇಶ್ವರಸ್ವಾಮಿ ದೇವಾಲಯ | | – | ED 45KAM63 dt.12.7.63 (Gazette dt.18.7.63) |
| | " | ಮಿರ್ಲೆ | 7 | ಅಮೃತೇಶ್ವರ ದೇವಾಲಯ | | – | ITY 81 KMU 84 dt.10.4.87 |
| | " | " | 8 | ಯೋಗಾ ನರಸಿಂಹಸ್ವಾಮಿ ದೇವಾಲಯ | | – | ITY80KMU84 dt.21.5.92 |

| | | | | | | | |
|---|---|---|---|---|---|---|---|
| 4 | ಮೈಸೂರು | ಸಾಲಿಗ್ರಾಮ | 9 | ರಾಮಾನುಜಾಚಾರ್ಯ ದೇವಾಲಯ | | – | No.D.8048 Edn 8625 Dated 12.09.1930 |
| | " | ಚಾಮುಂಡಿಬೆಟ್ಟ | 10 | ಬೆಟ್ಟದ ಮೇಲಿರುವ ಚಾಮುಂಡೇಶ್ವರಿ ದೇವಾಲಯ ಹಾಗೂ ಮಹಾಬಲೇಶ್ವರ ದೇವಾಲಯ | | – | |
| | " | ಲಿಂಗಾಬುದಿಪಾಳ್ಯ | 11 | ಶ್ರೀ ಮಹಾಲಿಂಗೇಶ್ವರ ದೇವಾಲಯ | | – | ಸಂಖ್ಯೆ: ಕಸಂವಾಪ್ರ 93 ಕೆಎಂಯು 2008 ದಿನಾಂಕ:26.11.2010 |
| | ಮೈಸೂರು | ಚಾಮುಂಡಿಬೆಟ್ಟ | 12 | ಬೃಹತ್ ನಂದಿ | | – | |
| | " | ಮರಸೆ | 13 | ನಾರಾಯಣ ಮತ್ತು ಮರಳೇಶ್ವರವರ ದೇವಾಲಯಗಳು | | – | No.D.8048 Edn 8625 Dated 12.09.1930 |
| | " | ಮೈಸೂರು | 14 | ವೆಲ್ಲಿಂಗ್‌ಟನ್ ಲಾಡ್ಜ್ (ಕಟ್ಟಡ) | | – | ITY32KMU87 dt.29.8.91 |
| | | ಮೈಸೂರು ಕೋಟೆ | 15 | ಕೋಟೆ ಸೋಮೇಶ್ವರ ಹಾಗೂ ಕೋಡಿ ಭೈರವೇಶ್ವರ ದೇವಾಲಯ | | – | |
| | " | " | 16 | ಲಕ್ಷ್ಮೀರಮಣ ದೇವಾಲಯ | | – | No.D.8048 Edn 8625 Dated 12.09.1930 |
| | " | " | 17 | ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ | | – | |
| | " | " | 18 | ತ್ರಿನೇಶ್ವರ ದೇವಾಲಯ | | – | |
| | " | " | 19 | ವರಹಾಸ್ವಾಮಿ ದೇವಾಲಯ | | – | No.D.8048 Edn 8625 Dated 12.09.1930 |
| | " | ವರುಣ | 20 | ಮಹಾಲಿಂಗೇಶ್ವರ ದೇವಾಲಯ | | – | No.D.8048 Edn 8625 Dated 12.09.1930 |

| | | | | | | | |
|---|---|---|---|---|---|---|---|
| 5 | ನಂಜನಗೂಡು | ಹೆಡತಲೆ | 21 | ಲಕ್ಷ್ಮೀಕಾಂತ ದೇವಾಲಯ | | - | No.D.8048 Edn 8625 Dated 12.09.1930 |
| | | | 22 | ನಾಗೇಶ್ವರ ದೇವಾಲಯ | | - | No.D.8048 Edn 8625 Dated 12.09.1930 |
| | " | ಕಳಲೆ | 23 | ಲಕ್ಷ್ಮೀಕಾಂತ ದೇವಾಲಯ ಹಾಗೂ ಸುತ್ತಮುತ್ತಣ ದೇವಾಲಯಗಳು, ಮಂಟಪಗಳು ಹಾಗೂ ಸತೀಗುಡಿಯ ಗಂಧದ ದ್ವಾರ | | - | |
| | | ನಂಜನಗೂಡು | | - | 2 | ಶ್ರೀ ಶ್ರೀಕಂಠೇಶ್ವರ ದೇವಾಲಯ | |
| | ನಂಜನಗೂಡು | ಸುತ್ತೂರು | 24 | ನಾರಾಯಣ ದೇವಾಲಯ | | - | No.D.8048 Edn 8625 Dated 12.09.1930 |
| | " | " | 25 | ಸೋಮೇಶ್ವರ ದೇವಾಲಯ | | - | No.D.8048 Edn 8625 Dated 12.09.1930 |
| | " | ತಗಡೂರು | 26 | ಮೂಲಸ್ಥಾನೇಶ್ವರ ದೇವಾಲಯ | | - | ಸಂಕಇ ೯ ಕೆಎಂಯು ೯೬, ದಿನಾಂಕ: 24/06/1996 |
| 6 | ಪಿರಿಯಾಪಟ್ಟಣ | ಬೆಟ್ಟದಪುರ | | - | 3 | ಸಿಡಿಲು ಮಲ್ಲಿಕಾರ್ಜುನ ದೇವಾಲಯ | |
| | " | ಪಿರಿಯಾಪಟ್ಟಣ | 27 | ಚೆನ್ನಕೇಶವ ದೇವಾಲಯ | | | ಸಂಕಇ 112 ಕೆಎಂಯು 2001, ದಿನಾಂಕ: 31.05.2006 |
| | " | ಕಿತ್ತೂರು | | - | 4 | ಪ್ರಾಗೈತಿಹಾಸಿಕ ನೆಲೆ | |

| | | | | | | | |
|---|---|---|---|---|---|---|---|
| 7 | ತಿ.ನರಸೀಪುರ | ಬನ್ನೂರು | 28 | ಹನುಮಂತೇಶ್ವರ ದೇವಾಲಯ | | - | |
| .. | | ಸೋಮನಾಥಪುರ | 29 | ಪಂಚಲಿಂಗೇಶ್ವರ ದೇವಾಲಯ | 5 | ಕೇಶವ ದೇವಾಲಯ | ಕಸಂವಾಪ್ರ 125 ಕೆಎಂಯು 2011 ದಿನಾಂಕ:12.12.2012 |
| | .. | ತಿ.ನರಸೀಪುರ | 30 | ಅಗಸ್ತ್ಯೇಶ್ವರ ದೇವಾಲಯ | | – | ED 45 TAM 63 DT.12.07.1963 (GAZETTE DT 18.07.1963) |
| | .. | " | 31 | ಗುಂಜಾ ನರಸಿಂಹಸ್ವಾಮಿ ದೇವಾಲಯ | | – | ITY23KMU88 dt. 30.10.91 |
| | .. | ತಲಕಾಡು | 32 | ತಲಕಾಡು ಮರಳು ದಿನ್ನೆಗಳು | 6 | ಕೀರ್ತಿ ನಾರಾಯಣ ದೇವಾಲಯ | ITY113KMU92 dt. 21.12.94 |
| | | | | – | 7 | ವೈದ್ಯೇಶ್ವರ ದೇವಾಲಯ | |
| 7 | **ತಾಲ್ಲೂಕುಗಳು** | | 32 | ಸ್ಮಾರಕಗಳು/ನೆಲೆಗಳು | 7 | ಸ್ಮಾರಕಗಳು/ನೆಲೆಗಳು | |

| ಕೋಲಾರ ಜಿಲ್ಲೆ | | | | | | | |
|---|---|---|---|---|---|---|---|
| ಕ್ರ ಸಂ | ತಾಲ್ಲೂಕು | ಸ್ಥಳ | ಕ್ರ ಸಂ | ರಾಜ್ಯದ ಸ್ಮಾರಕಗಳು/ | ಕ್ರ ಸಂ | ಎ.ಎಸ್.ಐ ಸ್ಮಾರಕಗಳು/ನೆಲೆಗಳು | ಸರ್ಕಾರಿ ಆದೇಶ ಸಂಖ್ಯೆ |
| 1 | ಬಂಗಾರಪೇಟೆ | ಬೇತಮಂಗಲ | 1 | ವಿಜಯೇಂದ್ರ ದೇವಾಲಯ | | | |
| | ಬಂಗಾರಪೇಟೆ | ಬೂದಿಕೋಟೆ | | | 1 | ಹೈದರಲಿಯ ಜನ್ಮಸ್ಥಳ | |
| | ಬಂಗಾರಪೇಟೆ | ಹುನಕೊಂಡ | | – | 2 | ಪ್ರಾಗೈತಿಹಾಸಿಕ ನೆಲೆ | |
| 2 | ಚಿಂತಾಮಣಿ | ಆಲಂಗಿರಿ | 2 | ವೆಂಕಟರಮಣಸ್ವಾಮಿ ದೇವಾಲಯ | | | No.D.8048 Edn, 86-25 Dated:12.09.1930 |
| | " | ಕೈವಾರ | 3 | ಅಮರನಾರಾಯಣ ದೇವಾಲಯ (ಭೀಮೇಶ್ವರ ಮತ್ತು ನಕುಲೇಶ್ವರ ದೇವಾಲಯಗಳು) | | | No.D.8048 Edn, 86-25 Dated:12.09.1930 |
| 5 | ಕೋಲಾರ | ಕೋಲಾರ | 4 | ಬಾರಾ ಇಮಾಮ್ ಮಕಾನ್ | 3 | ಕೋಲಾರಮ್ಮನ ದೇವಾಲಯ | No.D.8048 Edn, 86-25 Dated:12.09.1930 |
| | ಕೋಲಾರ | ಕಲ್ಲಂಡೂರು | 5 | ಶ್ರೀ ಈಶ್ವರ ದೇವಾಲಯ | | | ಕಸಂವಾ 09 ಕೆಎಂಯು 2015, ದಿನಾಂಕ:30.07.2015 |
| | " | " | | – | 4 | ಹೈದರಾಲಿಯ ತಂದೆಯ ಸಮಾಧಿ | |
| | " | " | | – | 5 | ಸೋಮೇಶ್ವರ ದೇವಾಲಯ | |
| | " | ಸೀತಿ | 6 | ಶ್ರೀಪತೀಶ್ವರ ದೇವಾಲಯ | | – | ಕಸಂವಾ 95 ಕೆಎಂಯು 2014, ದಿನಾಂಕ:07.05.2015 |

| | | | | | | | |
|---|---|---|---|---|---|---|---|
| | ಕೋಲಾರ | ವಕ್ಕಲೇರಿ | 7 | ಮಾರ್ಕಂಡೇಶ್ವರ ದೇವಾಲಯ | | – | |
| 6 | ಮಾಲೂರು | ಮಡಿವಾಳ | 8 | ಸ್ವಯಂಭೇಶ್ವರ ದೇವಾಲಯ | | – | |
| 7 | ಮುಳಬಾಗಿಲು | ಅವನಿ | | – | 6 | ರಾಮಲಿಂಗೇಶ್ವರ ದೇವಾಲಯ ಹಾಗೂ ಶಾಸನಗಳು | |
| | ಮುಳಬಾಗಿಲು | ದೇವರಾಜ ಸಮುದ್ರ ಗ್ರಾಮ | 9 | ದೊಡ್ಡ ಗರುಡಶಯನ, ಚಿಕ್ಕಗರುಡ ಶಯನ, ಆಗ್ನಿ ಸ್ತೋಮಗಳು, ದೊಡ್ಡ ಬಂಡೆ ತೋಪೆ-ಬಾವಿ, ತೋಪೆಬಾವಿಯ ಹತ್ತಿರದ ಬೃಂದಾವನ, ಗಾರೆಬಾವಿ; ಅದರ ಪಶ್ಚಿಮಕ್ಕೆ ಇರುವ ಮಂಟಪ; ಆಂಜನೇಯಸ್ವಾಮಿ ದೇವಾಲಯ ಹಾಗೂ ಪುಷ್ಕರಣಿ | | – | ITY 144 KMU 84 dt.18.5.85 |
| | " | ಕುರುಡುಮಲೆ | 10 | ಸೋಮೇಶ್ವರ ದೇವಾಲಯ ಮತ್ತು ಶಾಸನಗಳು | | – | No.D.8048 Edn, 86-25 Dated:12.09.1930 |
| | " | " | 11 | ವಿನಾಯಕ ದೇವಾಲಯ | | – | No.D.8048 Edn, 86-25 Dated:12.09.1930 |
| | " | ಮುಳಬಾಗಿಲು | 12 | ಹೈದರಲಿ ದರ್ಗಾ | | – | No.D.8048 Edn, 86-25 Dated:12.09.1930 |
| | " | " | 13 | ಶ್ರೀಪಾದರಾಯರ ಬೃಂದಾವನ | | – | No.D.8048 Edn, 86-25 Dated:12.09.1930 |
| | " | " | 14 | ವಿಠ್ಠಲನಾರಾಯಣ ದೇವಾಲಯ | | – | |
| | " | ವಿರೂಪಾಕ್ಷಪುರ | 15 | ಈಶ್ವರ ದೇವಾಲಯ | | – | |
| 7 | ತಾಲ್ಲೂಕುಗಳು | | 15 | ಸ್ಮಾರಕಗಳು/ನೆಲೆಗಳು | 6 | ಸ್ಮಾರಕಗಳು/ನೆಲೆಗಳು | |